## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸಾದಿಲ್ವಾರು ವೆಚ್ಚ ಕೈಪಿಡಿ 1958ರ ನಿಯಮ 55 (2) (ಬಿ) ರಡಿಯಲ್ಲಿ ಅಂಶಕಾಲಿಕ ಅಕುಶಲ ಕೆಲಸದಾಳುಗಳ (part time menials) ಸೇವೆ ಪಡೆಯುವುದನ್ನು ಸ್ಥಗಿತಗೊಳಿಸುವ ಬಗ್ಗೆ.

ಓದಲಾಗಿದೆ: ಸರ್ಕಾರದ ಆದೇಶ ಸಂ:ಆಇ 05 ಟಿಎಫ್‌ಪಿ 2012, ದಿ:25.6.2012.

ಪ್ರಸ್ತಾವನೆ :-

ಸಾದಿಲ್ವಾರು ವೆಚ್ಚ ಕೈಪಿಡಿ 1958ರ ನಿಯಮ 55 (2) (ಬಿ)ರ ಪ್ರಕಾರ ಇಲಾಖಾ ಮುಖ್ಯಾಧಿಕಾರಿಗಳು ಪಿಂಚಣಿ ರಹಿತ ಸಿಬ್ಬಂದಿಯಡಿ ಅಕುಶಲ ಅಂಶಕಾಲಿಕ ಕೆಲಸದಾಳುಗಳನ್ನು (part time menials) ಅಂದರೆ ಮಸಾಲ್ಚಿಗಳು, ಕಸಗುಡಿಸುವವರು, ಕ್ಲೀನರುಗಳು, ಕಾವಲುಗಾರರು, ನೀರುಕೊಡುವವರು, ಭಂಗಿಗಳು, ತೋಟಿಗಳು ಹಾಗೂ ಮಾಲಿಗಳು ಮುಂತಾದವರುಗಳನ್ನು ಒಂದು ವರ್ಷಕ್ಕೆ ಮೀರದಂತೆ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿತ್ತು.

ಮೇಲೆ (1)ರಲ್ಲಿ ಓದಲಾದ ಆದೇಶದಲ್ಲಿ ಸಾದಿಲ್ವಾರು ವೆಚ್ಚ ಕೈಪಿಡಿ 55 (2)(ಬಿ)ರ ನಿಯಮಗಳನ್ವಯ ಎಲ್ಲಾ ಇಲಾಖಾ ಮುಖ್ಯಸ್ಥರುಗಳು ಮತ್ತು ಇತರೆ ಅಧಿಕಾರಿಗಳಿಗೆ 3 ವರ್ಷಗಳ ಅವಧಿ ಮೀರದಂತೆ ಸಾದಿಲ್ವಾರು ವೆಚ್ಚದಲ್ಲಿ ಅಕುಶಲ ಅಂಶಕಾಲಿಕ ಕೆಲಸದಾಳುಗಳ ಸೇವೆಯನ್ನು ಪಡೆಯಲು ಮತ್ತು ಮಾಸಿಕ ಸಂಚಿತ ಸಂಭಾವನೆಯನ್ನು ಮಂಜೂರು ಮಾಡುವ ಆರ್ಥಿಕ ಅಧಿಕಾರವನ್ನು ಪ್ರತ್ಯಾಯೋಜಿಸಲಾಗಿದೆ.

ಸಾದಿಲ್ವಾರು ವೆಚ್ಚ ಕೈಪಿಡಿ 1958ರ ಪ್ರಸ್ತಾವಿಕ ಭಾಗದಲ್ಲಿಯೇ ಸ್ಪಷ್ಟಪಡಿಸಿರುವಂತೆ ಈ ಕೈಪಿಡಿಯ ನಿಯಮಗಳನ್ನು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಮಾಡುವ ಸಾದಿಲ್ವಾರು ವೆಚ್ಚವನ್ನು ನಿಯಂತ್ರಿಸಲು ರಚಿಸಲಾಗಿದೆ.

ಸಾದಿಲ್ವಾರು ವೆಚ್ಚ ಕೈಪಿಡಿಯ ನಿಯಮ 2ರಲ್ಲಿ ವ್ಯಾಖ್ಯಾನಿಸಿರುವಂತೆ ಸರ್ಕಾರಿ ಕಛೇರಿಗಳನ್ನು ನಿರ್ವಹಿಸಲು ಮಾಡುವ ವಿವಿಧ ವೆಚ್ಚಗಳನ್ನು "ಸಾದಿಲ್ವಾರು ವೆಚ್ಚ"ವೆಂದು ಪರಿಗಣಿಸಲಾಗುವುದು. ಈ ಕೈಪಿಡಿಯಲ್ಲಿ ನಿಗದಿಪಡಿಸಿರುವ ವಿಧಿವಿಧಾನಗಳು ಸಾದಿಲ್ವಾರು ವೆಚ್ಚದ ಬಗ್ಗೆ ಮಾತ್ರ ಅನ್ವಯವಾಗುತ್ತದೆ. ವಿವಿಧ ಸಾದಿಲ್ವಾರು ವೆಚ್ಚಗಳನ್ನು ಭರಿಸಲು ಮಾತ್ರ ಈ ನಿಯಮಗಳನ್ನು ಅನ್ವಯಿಸಬಹುದಾಗಿದ್ದು, ಯಾವುದೇ ನೇಮಕಾತಿಗಳನ್ನು ಮಾಡಿಕೊಳ್ಳಲು ಅವಕಾಶವಿಲ್ಲ.

ಆದಾಗ್ಯೂ, ಈ ನಿಯಮಗಳ ಅವಕಾಶಗಳನ್ನು ತಪ್ಪಾಗಿ ಅರ್ಥೈಸಿ ಹುದ್ದೆಗಳೆದುರಿಗೆ ನೇಮಕಾತಿ ಮಾಡಿರುವುದು ಕಂಡು ಬಂದಿದೆ. ಇದು ನಿಯಮದ ಆಶಯಗಳಿಗೆ ವಿರುದ್ಧವಾಗಿದ್ದು, ಇಂತಹ ಕ್ರಮದಿಂದ ಕಾನೂನು ಮತ್ತು ಆಡಳಿತಾತ್ಮಕ ಸಮಸ್ಯೆಗಳು ಉದ್ಭವಿಸುವ ಸಂಭವವಿದೆ. ಅಲ್ಲದೆ, ಬದಲಾದ ಆಡಳಿತ ವ್ಯವಸ್ಥೆಯಲ್ಲಿ ಇಂತಹ ಪದ್ಧತಿಯ ಮುಂದುವರಿಕೆಯ ಅಗತ್ಯತೆಯ ಬಗ್ಗೆಯೇ ಪರಿಶೀಲಿಸಬೇಕೆಂದು ಮನಗಂಡು ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ : ಆಇ 3 ಟಿಎಫ್‌ಪಿ 2017,**
**ಬೆಂಗಳೂರು ದಿನಾಂಕ:07-07-2017.**

ಪ್ರಸ್ತಾವನೆಯಲ್ಲಿ ವಿವರಿಸಿದ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಸಾದಿಲ್ವಾರು ವೆಚ್ಚ ಕೈಪಿಡಿ ನಿಯಮ 55 (2) (ಬಿ)ಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದು ಪಡಿಸಿದೆ. ಇನ್ನು ಮುಂದೆ ಈ ಅವಕಾಶದಡಿ ಯಾವುದೇ ಅಂಶಕಾಲಿಕ ಅಕುಶಲ/ಅನಿಪುಣ ಕೆಲಸಗಾರರನ್ನು ನೇಮಿಸಿಕೊಳ್ಳುವುದನ್ನು ನಿರ್ಬಂಧಿಸಿದೆ.

ಕಛೇರಿ ಸ್ವಚ್ಛತೆ, ಕಛೇರಿ ಕಾವಲು, ಕೈತೋಟ ನಿರ್ವಹಣೆ ಮುಂತಾದ ಕೆಲಸಗಳನ್ನು ಸೇವಾ ಗುತ್ತಿಗೆ (Service contract) ನೀಡುವ ಮೂಲಕ ನಿರ್ವಹಿಸಲು ತಿಳಿಸಿದೆ. ಇದಕ್ಕೆ ತಗಲುವ ವೆಚ್ಚವನ್ನು '051-ಸಾಮಾನ್ಯ ವೆಚ್ಚಗಳು' ರಡಿಯಲ್ಲಿ ಭರಿಸಲು ತಿಳಿಸಿದೆ.

ಈ ನಿಯಮದಡಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಹಾಗೂ ಆದೇಶ ಸಂಖ್ಯೆ:ಆಇ 5 ಟಿಎಫ್‌ಪಿ 2012, ದಿ:25.06.2012 ರನ್ವಯ ಮಾಸಿಕ ಸಂಚಿತ ಸಂಭಾವನೆ ಪಡೆಯುತ್ತಿರುವ ಎಲ್ಲಾ ಅರೆಕಾಲಿಕ ಅಕುಶಲ ಕೆಲಸದಾಳುಗಳ ಸೇವೆಯನ್ನು ಅವರುಗಳ ನೇಮಕಾತಿ ಅವಧಿ ಪೂರೈಸಿದ ತಕ್ಷಣ ಬರಖಾಸ್ತು/ಮುಕ್ತಾಯ ಮಾಡತಕ್ಕದ್ದು.

ಸಾದಿಲ್ವಾರು ವೆಚ್ಚ ಕೈಪಿಡಿ ನಿಯಮ 55 (2) (ಬಿ) ನಿಯಮಗಳಿಗೆ ಸೂಕ್ತ ತಿದ್ದುಪಡಿ ತರಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ರಿತ್ವಿಕ್ ಪಾಂಡೆ)
ಸರ್ಕಾರದ ಕಾರ್ಯದರ್ಶಿ (ಆ ಮತ್ತು ಸಂ)
ಆರ್ಥಿಕ ಇಲಾಖೆ

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ:14:ಯೋಜನೆ:2016-17

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:08-09-2017

ಮೇಲ್ಕಂಡ ಸರ್ಕಾರದ ಆದೇಶವನ್ನು ಈ ಕೆಳಕಂಡವರ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ ಪರಿಚಲಿಸಲಾಗಿದೆ.

1. ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು/ಮೈಸೂರು/ಶಿವಮೊಗ್ಗ/ಮಂಗಳೂರು/ಧಾರವಾಡ/ಕಲಬುರಗಿ.
2. ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು
3. ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ ಬೆಂಗಳೂರು.-ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
4. ಕೇಂದ್ರ ಕಛೇರಿಯ ಎಲ್ಲ ಅಧಿಕಾರಿಗಳ ಆಪ್ತ ಸಹಾಯಕರು.
5. ಕೇಂದ್ರ ಕಛೇರಿಯ ಎಲ್ಲ ವಿಭಾಗಗಳ ಮ್ಯಾನೇಜರ್/ಅಧೀಕ್ಷಕರು
6. ಕಛೇರಿ ಪ್ರತಿ

(ಕರಡು ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

ಕಾಲೇಜು ಶಿಕ್ಷಣ ನಿರ್ದೇಶಕರು